

# ಹೂ ಒಣಗಿ ಅಗರಬತ್ತಿಯಾಗಿ...

**ಪೂಜೆಗೆ ಬಳಸಿದ ಹೂಗಳನ್ನು ಬಾವಿಗೆ, ಹೊಳೆಗೆ ಸೇರಿಸುತ್ತಾರೆ. ಈ ಜಲಮಾಲಿನ್ಯ ತಪ್ಪಿಸುವ ಉದ್ದೇಶದಿಂದ ಕಾನ್ಪುರದ ನಿಖಿಲ್‌, ಅಗರಬತ್ತಿ ಉದ್ಯಮ ಆರಂಭಿಸಿದ್ದಾರೆ. ಮಂದಿರ, ಮಸೀದಿಗಳಿಂದ ದೊರೆಯುವ ಬಾಡಿದ ಹೂಗಳೇ ಅವರ ಉದ್ಯಮಕ್ಕೆ ಕಚ್ಚಾವಸ್ತುಗಳು.**

■ ಜೀವನ್ ಶೆಟ್ಟಿ





ದೇವಾಲಯಗಳಲ್ಲಿ ಉಪಯೋಗಿಸಿದ ಹೂವುಗಳು ಕಸದಬುಟ್ಟಿ ಸೇರುತ್ತವೆ. ಅಪರೂಪಕ್ಕೆ ಕೆಲವೆಡೆ ಆ ಹೂಗಳನ್ನು ಗೊಬ್ಬರ ಮಾಡಿ ಮತ್ತೆ ಗಿಡಗಳ ಬುಡಕ್ಕೆ ಸೇರಿಸಬಹುದು. ಆದರೆ, ಕಾನ್ಪುರದ ಯುವಕನೊಬ್ಬ ಬಾಡಿದ ಹೂಗಳಿಂದ ಅಗರಬತ್ತಿ ತಯಾರಿಸುತ್ತಿದ್ದಾನೆ.

ಕಾನ್ಪುರದ ನಿಖಿಲ್ ಗಂಪಾ ಎಂಬ ಯುವಕ ತನ್ನ ಸಹೋದರನೊಂದಿಗೆ ಸೇರಿ ದೇವಾಲಯಗಳು ಮತ್ತು ಮಸೀದಿಗಳಿಂದ ತ್ಯಾಜ್ಯ ಹೂವುಗಳನ್ನು ಸಂಗ್ರಹಿಸಿ, ಅವುಗಳಿಂದ ಧೂಪದ್ರವ್ಯಗಳನ್ನು ತಯಾರಿಸುವ ಉದ್ಯಮ ಆರಂಭಿಸಿ ಯಶಸ್ವಿಯಾಗಿದ್ದಾನೆ.

ಎನ್‌ಐಐಟಿ ದುರ್ಗಾಪುರದಿಂದ ಜೈವಿಕ ತಂತ್ರಜ್ಞಾನದಲ್ಲಿ ಎಂಜಿನಿಯರಿಂಗ್ ಪಡೆದಿರುವ ನಿಖಿಲ್ ಗಂಪಾ, ಆರಂಭದಲ್ಲಿ ಅಣಬೆಗಳಿಂದ ಕಾಗದ ತಯಾರಿಸಲು ಪ್ರಯತ್ನಿಸಿದರು. ಕಾಗದಕ್ಕಾಗಿ ಮರಗಳನ್ನು ಕತ್ತರಿಸುವ ಸಮಸ್ಯೆಗೆ ಪುಟ್ಟ ಪರಿಹಾರದ ರೂಪದಲ್ಲಿನ ಅವರ ಪ್ರಯತ್ನವು ಉದ್ಯಮವಾಗಿ ಯಶಸ್ವಿಯಾಗಲಿಲ್ಲ; ಜನರನ್ನು ತಲುಪಲಿಲ್ಲ. ಆದರೆ, ಅಣಬೆಗಳಿಂದ ಕಾಗದ ತಯಾರಿಸುವ ಪ್ರಯತ್ನದಲ್ಲಿನ ಜನಸಂಪರ್ಕ ಅವರಲ್ಲಿ ಹೊಸ ಹೊಳಹೊಂದನ್ನು ಹುಟ್ಟುಹಾಕಿತು. ಅದುವೇ ಬಳಸಿದ ಹೂಗಳಿಂದ